RNU AIR DHARWAD

APRIL 10, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಬಾಗಲಕೋಟೆ ಹಾಗೂ ದಾವಣಗೆರೆ ಉಪ ಚುನಾವಣೆ;** ಕ್ರಮವಾಗಿ, ಶೇಕಡ 68 ದಶಾಂಶ 7–4 ಹಾಗೂ 68 ದಶಾಂಶ 4–3 ರಷ್ಟು, ಮತದಾನ.
- **ಹವಾಮಾನ ವೈಪರಿತ್ಯ;** ರಾಜ್ಯದ 1 ಕೋಟಿ 48 ಲಕ್ಷ ಹೆಕ್ಟರ್ ಪ್ರದೇಶದ ಮಾವು ಬೆಳೆ, ಇಳಿ ಹಂಗಾಮಿನತ್ತ.
- **ರೇಲ್ವೆ ಮೆಗಾ ಕೋಚಿಂಗ್ ಟರ್ಮಿನಲ್** ಯೋಜನೆ, ಶೀಘ್ರ ರಾಜ್ಯದಲ್ಲಿ ಅನುಷ್ಠಾನ – ಕೇಂದ್ರ ಸಚಿವ ವಿ.ಸೋಮಣ್ಣ.
- **ಇಂದು, ವಿಶ್ವ ಹೋಮಿಯೋಪಥಿ** ದಿನಾಚರಣೆ.

<><><>

**ದಾವಣಗೆರೆ ದಕ್ಷಿಣ ಮತ್ತು** ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳಲ್ಲಿ, ಮತದಾನ ಶಾಂತಿಯುತವಾಗಿ ನಡೆಯಿತು. ಬಾಗಲಕೋಟೆಯಲ್ಲಿ ಮತದಾನದ ಅಂತ್ಯಕ್ಕೆ, ಶೇಕಡ 68 ದಶಾಂಶ 7–4 ಹಾಗೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ, ಶೇಕಡ 68 ದಶಾಂಶ 4–3 ರಷ್ಟು ಮತದಾನ ದಾಖಲಾಗಿದೆ ಎಂದು, ರಾಜ್ಯದ ಸಹಾಯಕ ಮುಖ್ಯ ಚುನಾವಣಾಧಿಕಾರಿ, ಆರ್.ವಿ. ರಾಘವನ್, ತಿಳಿಸಿದ್ದಾರೆ. ಮೇ 4 ರಂದು ಮತ ಎಣಿಕೆ ನಡೆಯಲಿದೆ.

<><><>

**ಧಾರವಾಡ, ರಾಮನಗರ ಸೇರಿದಂತೆ,** ಹಲವು ಜಿಲ್ಲೆಗಳಲ್ಲಿ,ಮಾವು ಗಿಡಗಳು, ಕಳೆದ ವರ್ಷದ ಡಿಸೆಂಬರ್‌ನಲ್ಲಿ ಹೂವು ಬಿಡಲಾರಂಭಿಸಿದ್ದವು. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ, ಈ ವರ್ಷದ ಜನವರಿ ತಿಂಗಳಾಂತ್ಯ ಹಾಗೂ ಫೆಬ್ರವರಿಯಲ್ಲಿ ಮಾವು ಗಿಡಗಳ, ಹೂವು ಬಿಡುವ ಪ್ರಕ್ರಿಯೆ ಉತ್ತಮವಾಗಿತ್ತು. ಈ ಹಿನ್ನೆಲೆ, ಈ ವರ್ಷ 'ಏರು ಹಂಗಾಮು' ಎಂದು ಅಂದಾಜಿಸಲಾಗಿತ್ತು.

<><><>

**ಮಾವು ಅಭಿವೃದ್ಧಿ ಮತ್ತು ಮಾರಾಟ ಮಂಡಳಿ** ಪ್ರಕಾರ, ಮಾವು ಹೂವು ಗೊಂಚಲಿನಲ್ಲಿ, ಹರ್ಮಾ ಫೋರೋಡಿಟ್ ಫ್ಲಾವರ್ಸ್, ಉಭಯಲಿಂಗಿ ಹೂವುಗಳ ಸಂಖ್ಯೆ ತೀರ ಕಡಿಮೆ ಇದ್ದು, ಗಂಡು ಹೂವುಗಳೇ ಹೆಚ್ಚಿನ ಪ್ರಮಾಣದಲ್ಲಿವೆ. ಈ ಹಿನ್ನೆಲೆ, ರಾಜ್ಯದ 1 ಕೋಟಿ 48 ಲಕ್ಷ ಹೆಕ್ಟರ್ ಪ್ರದೇಶದ, ಮಾವು ಬೆಳೆ ಇಳುವರಿ, 'ಇಳಿ ಹಂಗಾಮಿ'ಗೆ ಕಾರಣವಾಗಲಿದೆ ಎಂದು, ಅಂದಾಜಿಸಲಾಗಿದೆ.

<><><>

**ಧಾರವಾಡದ ಖ್ಯಾತ ಮಾವು ಬೆಳೆಗಾರ,** ಕೃಷ್ಣಕುಮಾರ ಭಾಗವತ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**2025–26ನೇ ಶೈಕ್ಷಣಿಕ ವರ್ಷದ,** ದ್ವಿತೀಯ ಪಿ.ಯು.ಸಿ. ವಾರ್ಷಿಕ ಪರೀಕ್ಷೆ –1ರ ಫಲಿತಾಂಶ ಪ್ರಕಟಗೊಂಡಿದ್ದು, 5 ಲಕ್ಷ 46 ಸಾವಿರದ 698 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಕಳೆದ ವರ್ಷಕ್ಕಿಂತ, ಶೇಕಡ 13ರಷ್ಟು ಫಲಿತಾಂಶ ಉತ್ತಮಗೊಂಡಿದ್ದು, ಈ ಬಾರಿ ಶೇಕಡ 86 ದಶಾಂಶ 4–8ರಷ್ಟು ವಿದ್ಯಾರ್ಥಿಗಳು, ತೇರ್ಗಡೆಯಾಗಿದ್ದಾರೆ. ಕಲಾ ವಿಭಾಗದಲ್ಲಿ ಶೇಕಡ 72 ದಶಾಂಶ 8–6 ರಷ್ಟು, ವಾಣಿಜ್ಯ ವಿಭಾಗದಲ್ಲಿ ಶೇಕಡ 88 ದಶಾಂಶ 0–4ರಷ್ಟು, ವಿಜ್ಞಾನ ವಿಭಾಗದಲ್ಲಿ ಶೇಕಡ 91 ದಶಾಂಶ 6–9ರಷ್ಟು ವಿದ್ಯಾರ್ಥಿಗಳು, ತೇರ್ಗಡೆಯಾಗಿದ್ದಾರೆ ಎಂದರು.

<><><>

**2026ರ ದ್ವಿತೀಯ ಪಿ.ಯು.ಸಿ.** ವಾರ್ಷಿಕ ಪರೀಕ್ಷೆ–2ರ, ಪರಿಷ್ಕೃತ ವೇಳಾಪಟ್ಟಿಯನ್ನು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಪ್ರಕಟಿಸಿದ್ದು, ಪರೀಕ್ಷೆ ಏಪ್ರಿಲ್ 30 ರಿಂದ ಆರಂಭವಾಗಿ, ಮೇ 13 ರಂದು ಕೊನೆಗೊಳ್ಳಲಿದೆ.

<><><>

**ನವ ಕಲಬುರಗಿ ನಿರ್ಮಾಣಕ್ಕೆ** ನೀಲನಕ್ಷೆ ತಯಾರಾಗಿದ್ದು, ಮುಂಬರುವ ಎರಡು ವರ್ಷಗಳಲ್ಲಿ, ಕಲಬುರಗಿ ಸಮಗ್ರವಾಗಿ ಅಭಿವೃದ್ಧಿಯಾಗಲಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಕಲಬುರಗಿ ಗಂಜ್ ಬಳಿಯ, ಎಸ್.ಆರ್.ಕೆ ಸಭಾಂಗಣದಲ್ಲಿ,ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ, ಕಾರ್ಯಕ್ಷಮತೆ ಹೆಚ್ಚಿಸುವಿಕೆ ಮತ್ತು ವೇಗಗೊಳಿಸುವಿಕೆ ಯೋಜನೆ ಅಡಿ, ಎಲ್ಲ ಪ್ರಕಾರದ ಆಟೋಮೊಬೈಲ್ ಸರ್ವೀಸ್ ಘಟಕದವರಿಗಾಗಿ, ಎರಡು ದಿನಗಳ, ಟೆಕ್ನಾಲಜಿ ಕ್ಲಿನಿಕ್ ಕಾರ್ಯಾಗಾರ, ಉದ್ಘಾಟಿಸಿ ಮಾತನಾಡಿದರು.

<><><>

**ಯುವ ಶಾಸಕರು ಹೊಸ ಆಲೋಚನೆ,** ತಂತ್ರಜ್ಞಾನ ಪಾರಂಗತ್ಯ ಹಾಗೂ ಜನಸಾಮಾನ್ಯರೊಂದಿಗೆ ನಿಕಟ ಸಂಪರ್ಕ ಹೊಂದುವುದರಿಂದ, ಪ್ರಜಾಪ್ರಭುತ್ವವನ್ನು ಚೈತನ್ಯಮಯವಾಗಿ, ರೂಪಿಸಬಹುದು ಎಂದು, ವಿಧಾನ ಪರಿಷತ್ ಸಭಾಪತಿ, ಬಸವರಾಜ ಹೊರಟ್ಟಿ ಹೇಳಿದ್ದಾರೆ. ಗೋವಾದಲ್ಲಿ ಆಯೋಜಿತ, ಕಾಮನ್‌ವೆಲ್ತ್ ಸಂಸದೀಯ ಸಂಘದ, ಪಶ್ಚಿಮ ವಲಯ ಸಮ್ಮೇಳನದಲ್ಲಿ, 2047ರ ವೇಳೆಗೆ, ಅಭಿವೃದ್ಧಿ ಹೊಂದಿದ ಭಾರತ ನಿರ್ಮಾಣದಲ್ಲಿ, ಯುವ ಶಾಸಕರ ಪಾತ್ರ ಕುರಿತು, ಅವರು ಮಾತನಾಡಿದರು.

<><><>

**ರಾಜ್ಯದಲ್ಲಿ, ರೇಲ್ವೆ ಮೆಗಾ** ಕೋಚಿಂಗ್ ಟರ್ಮಿನಲ್ ಯೋಜನೆ, ಅನುಷ್ಠಾನಗೊಳ್ಳಲಿದೆ ಎಂದು ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಮೈಸೂರಿನ ರೇಲ್ವೆ ಕಚೇರಿಯಲ್ಲಿ, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿದ ಅವರು, ಬೆಂಗಳೂರಿನ ಯಲಹಂಕ ಬಳಿ, 6 ಸಾವಿರ ಕೋಟಿ ರೂಪಾಯಿ ಮೌಲ್ಯದ, ಜಪಾನ್ ಹಾಗೂ ಚೀನಾ ಮಾದರಿಯ, ಮೂರು ಅಂತಸ್ತುಗಳ, ಮೆಗಾ ಕೋಚಿಂಗ್ ಟರ್ಮಿನಲ್ ಯೋಜನೆ ಅನುಷ್ಠಾನಗೊಳ್ಳಲಿದೆ ಎಂದರು.

<><><>

**ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ** ಮಾತನಾಡಿ, ಮೈಸೂರು ಹಾಗೂ ಬೆಂಗಳೂರು ಸುತ್ತಲಿನ ಗ್ರಾಮಗಳ ಮಧ್ಯದ ರೇಲ್ವೆ ಹಳಿಗಳಿಗೆ, ಕೆಳ ಹಾಗೂ ಮೇಲ್ ಸೇತುವೆ ನಿರ್ಮಿಸಿ, ರೈತರಿಗೆ ಅನುಕೂಲ ಕಲ್ಪಿಸಲು, ಯೋಜಿಸಲಾಗಿದೆ ಎಂದರು.

<><><>

**ವಿಶ್ವ ಹೋಮಿಯೋಪಥಿ ದಿನವಿಂದು.** ಜರ್ಮನಿಯ ಖ್ಯಾತ ವೈದ್ಯ, ಸ್ಯಾಮ್ಯುಯೆಲ್ ಹ್ಯಾನೆಮನ್ ಅವರ, ಜನ್ಮ ದಿನವಾದ ಇಂದು, ವಿಶ್ವ ಹೋಮಿಯೋಪಥಿ ದಿನಾಚರಣೆ. "ಸುಸ್ಥಿರ ಆರೋಗ್ಯಕ್ಕಾಗಿ ಹೋಮಿಯೋಪಥಿ" ಎಂಬ ಧ್ಯೇಯದೊಂದಿಗೆ, ಸಮಗ್ರ ಆರೋಗ್ಯ ರಕ್ಷಣೆ ಮಾದರಿಗಳನ್ನು ಬಲಪಡಿಸಲು, ಈ ದಿನ ಒತ್ತು ನೀಡುತ್ತದೆ. ಭಾರತ ಸರ್ಕಾರದ ಆಯುಷ್ ಸಚಿವಾಲಯ, 34 ಹೋಮಿಯೋಪಥಿ ಸಂಶೋಧನಾ ಕೇಂದ್ರಗಳಿಗೆ, ನೆಲೆ ಒದಗಿಸಿ, ವ್ಯವಸ್ಥಿತ ಸಂಶೋಧನೆಗೆ ಅಡಿಪಾಯ ಹಾಕಿದೆ.

<><><>

ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಕೊಪ್ಪಳ ಜಿಲ್ಲೆ, ಗಂಗಾವತಿಯ, ಖ್ಯಾತ ಹೋಮಿಯೋಪಥಿ ವೈದ್ಯ ಡಾಕ್ಟರ್ ಪ್ರಸನ್ನ ಆಚಾರ್ಯ.

<><><>

**ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕು,** ಹುಲಿಕಲ್ ಘಾಟಿಯಲ್ಲಿ, ಚಂಡಿಕಾಂಬಾ ದೇವಸ್ಥಾನದ ತಿರುವಿನಲ್ಲಿ, ರಸ್ತೆ ಅಂಚಿನ ಕಾಮಗಾರಿ ವೇಳೆ, ಭಾರಿ ಪ್ರಮಾಣದಲ್ಲಿ ನಿನ್ನೆ ಸಂಜೆ ಮಣ್ಣು ಕುಸಿದು, ಮೂವರು ಕಾರ್ಮಿಕರು, ಸ್ಥಳದಲ್ಲೇ ಮೃತಪಟ್ಟು, ನಾಲ್ವರು ಗಂಭೀರವಾಗಿ ಗಾಯಗೊಂಡ ಘಟನೆ, ವರದಿಯಾಗಿದೆ. ದುರ್ಘಟನೆಯಲ್ಲಿ ಮೃತಪಟ್ಟ ಕಾರ್ಮಿಕರನ್ನು, ಹೊಸನಗರ ಸಮೀಪದ ಚಕ್ಕಾರು ನಗರದ, ಕೆ. ರಾಘವೇಂದ್ರ, ಹಾವೇರಿ ಜಿಲ್ಲೆ, ನೆಲೋಗಲ್ ಗ್ರಾಮದ ರಾಜು ಹಾಗೂ ಶಬ್ಬೀರ್ ಎಂದು, ಗುರುತಿಸಲಾಗಿದೆ. ಗಾಯಗೊಂಡಿರುವ ಕಾರ್ಮಿಕರಾದ, ಸುಮಂತ, ಅಶೋಕ, ಸಚಿನ ಹಾಗೂ ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕಿನ, ಗುಡ್ಡೇನಹಳ್ಳಿಯ ಪರಮೇಶ ಅವರನ್ನು, ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ ಎಂದು ವರದಿ ತಿಳಿಸಿದೆ.

<><><>

**ಚಿಕ್ಕಮಗಳೂರು ಜಿಲ್ಲೆ,** ಮುಳ್ಳಯ್ಯನಗಿರಿಯ, ಮಾಣಿಕ್ಯಧಾರಾ ಬಳಿ, ಕೇರಳಂ ಮೂಲದ ಬಾಲಕಿ ಶ್ರೀನಂದಾ ಪತ್ತೆಗೆ, ಪಶ್ಚಿಮ ವಲಯ ಐ.ಜಿ.ಪಿ ಅಮಿತಸಿಂಗ್ ನೇತೃತ್ವದಲ್ಲಿ, ಕಾರ್ಯಾಚರಣೆ ಚುರುಕುಗೊಂಡಿದೆ.

<><><>

**ರಾಜ್ಯದ ಗಿರಿಶ್ರೇಣಿಗಳಿಗೆ ಭೇಟಿ ನೀಡುವ,** ಚಾರಣಿಗರ ಸುರಕ್ಷತೆಯ ಹಿತದೃಷ್ಟಿಯಿಂದ, ಪ್ರಮಾಣಿತ ಮಾನದಂಡ ರೂಪಿಸಲು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಅರಣ್ಯಾಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

**ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ,** ಯೋಗೇಶಗೌಡ ಕೊಲೆ ಪ್ರಕರಣದ ತೀರ್ಪನ್ನು, ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ, ನ್ಯಾಯಾಧೀಶ ಸಂತೋಷ ಗಜಾನನ ಭಟ್, 15ನೇ ತಾರೀಖು ಪ್ರಕಟಿಸಲಿದ್ದಾರೆ.

<><><>

**ಕೊಪ್ಪಳ ಜಿಲ್ಲಾಧಿಕಾರಿ ಸುರೇಶ ಇಟ್ನಾಳ,** ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿ, ಕ್ರಸ್ಟ್ ಗೇಟ್ ಫ್ಯಾಬ್ರಿಕೇಶನ್ ಕಾಮಗಾರಿಯನ್ನು, ಪರಿಶೀಲಿಸಿದರು.

<><><>

**ಗದಗ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ** ನೇತೃತ್ವದಲ್ಲಿ, ಗದಗ ನಗರ ಮತ್ತು ಗ್ರಾಮೀಣ ಭಾಗಗಳ ಗಣತಿದಾರರಿಗೆ, ತರಬೇತಿ ಕಾರ್ಯಕ್ರಮ, ಗುರುಬಸವ ಪ್ರೌಢಶಾಲೆಯಲ್ಲಿ ಜರುಗಿತು.

<><><>

**ಧಾರವಾಡ ರಂಗಾಯಣ,** 'ಚಿಣ್ಣರಮೇಳ 2026; ಅಭಿನಯ–ಅಭಿವ್ಯಕ್ತಿ ಮಕ್ಕಳ ರಂಗ ತರಬೇತಿ' ಶಿಬಿರವನ್ನು, ನಾಡಿದ್ದು 12 ರಿಂದ, ಮೇ 3ನೇ ತಾರೀಖಿನ ವರೆಗೆ ಆಯೋಜಿಸಿದೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಬಾಗಲಕೋಟೆ ಹಾಗೂ ದಾವಣಗೆರೆ ಉಪ ಚುನಾವಣೆ;** ಕ್ರಮವಾಗಿ, ಶೇಕಡ 68 ದಶಾಂಶ 7–4 ಹಾಗೂ 68 ದಶಾಂಶ 4–3 ರಷ್ಟು, ಮತದಾನ.
- **ಹವಾಮಾನ ವೈಪರಿತ್ಯ;** ರಾಜ್ಯದ 1 ಕೋಟಿ 48 ಲಕ್ಷ ಹೆಕ್ಟರ್ ಪ್ರದೇಶದ ಮಾವು ಬೆಳೆ, ಇಳಿ ಹಂಗಾಮಿನತ್ತ.
- **ರೇಲ್ವೆ ಮೆಗಾ ಕೋಚಿಂಗ್ ಟರ್ಮಿನಲ್** ಯೋಜನೆ, ಶೀಘ್ರ ರಾಜ್ಯದಲ್ಲಿ ಅನುಷ್ಟಾನ – ಕೇಂದ್ರ ಸಚಿವ ವಿ.ಸೋಮಣ್ಣ.
- **ಇಂದು, ವಿಶ್ವ ಹೋಮಿಯೋಪಥಿ** ದಿನಾಚರಣೆ.

<><><>